66/2021

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 1053(1226)

ಸದಸ್ಯರ ಹೆಸರು : ಡಾ: ವೈ. ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)

ಉತ್ತರಿಸುವ ದಿನಾಂಕ : 23/12/2021

ಉತ್ತರಿಸುವ ಸಚಿವರ ಹೆಸರು : ಮುಖ್ಯಮಂತ್ರಿಯವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಶಿಶುಪಾಲನಾ ರಜೆಯನ್ನು ಸರ್ಕಾರಿ ಮಹಿಳಾ ಅಧಿಕಾರಿ/ನೌಕರರಿಗೆ ಯಾವ ದಿನಾಂಕದಿಂದ ಜಾರಿಗೆ ತರಲಾಗಿದೆ; ಆದೇಶ ಹೊರಡಿಸಲು ನಿರ್ಧರಿತವಾದ ಮಾನದಂಡಗಳೇನು; ರಜೆ ಮಂಜೂರಾತಿಗೆ ಅನುಸರಿಸುವ ಕ್ರಮಗಳೇನು; (ಆದೇಶದ ಪ್ರತಿ ನೀಡುವುದು)	ಆರ್ಥಿಕ ವರ್ಷ 2021-22ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-37ರಲ್ಲಿ ಘೋಷಿಸಿರುವಂತೆ, ಸರ್ಕಾರಿ ಮಹಿಳಾ ಅಧಿಕಾರಿ/ನೌಕರರಿಗೆ ಸರ್ಕಾರಿ ಆದೇಶ ಸಂಖ್ಯೆ:ಆಇ 4(ಇ) ಸೇನಿಸೇ 2021, ದಿನಾಂಕ:21/06/2021ರನ್ವಯ ಶಿಶುಪಾಲನಾ ರಜೆಯ ಸೌಲಭ್ಯವನ್ನು ಆದೇಶದ ದಿನಾಂಕದಿಂದ ಜಾರಿಗೆ ತರಲಾಗಿರುತ್ತದೆ. ಈ ಆದೇಶದಲ್ಲಿ ಸದರಿ ರಜೆಯನ್ನು ಮಂಜೂರು ಮಾಡಲು ಅನುಸರಿಸುವ ಕ್ರಮಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ. ಮಹಿಳಾ ಸರ್ಕಾರಿ ನೌಕರರ, ಅತ್ಯಂತ ಕಿರಿಯ ಮಗುವು 18 ವರ್ಷ ತಲುಪುವವರೆಗಿನ ಅವಧಿಗೆ ಈ ರಜೆಯ ಸೌಲಭ್ಯವನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಪ್ರತಿ ಬಾರಿಯ ಈ ರಜೆ ಮಂಜೂರಾತಿಯು ಕನಿಷ್ಠ ೧೫ ದಿನಗಳಿಗಿಂತ ಕಡಿಮೆ ಇರಬಾರದೆಂದು ತಿಳಿಸಲಾಗಿದೆ. ಈ ರಜೆಯನ್ನು ಯಾವುದೇ ರಜೆ ಲೆಕ್ಕದಿಂದ ಕಳೆಯತಕ್ಕದ್ದಾಗಿರುವುದಿಲ್ಲ. ಶಿಶುಪಾಲನಾ ರಜೆಯ ಮಂಜೂರಾತಿಗಾಗಿ ಯಾವುದೇ ಪೂರಕ ದಾಖಲೆಗಳನ್ನು ಪಡೆಯುವ ಅವಶ್ಯಕತೆಯಿರುವುದಿಲ್ಲ. ಸೇವಾ ಪುಸ್ತಕದಲ್ಲಿ ನಮೂದಿಸಿರುವ ಮಕ್ಕಳ ವಿವರಗಳ ಆಧಾರದ ಮೇಲೆ ಮಂಜೂರು ಮಾಡಲು ಅವಕಾಶವಿರುತ್ತದೆ. ಆದೇಶದ ಪ್ರತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.
ಆ)	ಸರ್ಕಾರಿ ಅಧಿಕಾರಿ/ನೌಕರರಿಗೆ ಲಭ್ಯವಿರುವ ಮಾತೃತ್ವ ಹಾಗೂ ಪಿತೃತ್ವ ರಜೆಗಳ ವಿವರಗಳೇನು; (ನಿಗಧಿಪಡಿಸಿರುವ ರಜಾ ದಿನಗಳ ಮಾಹಿತಿಗಳನ್ನು ತಿಳಿಸುವುದು.)	ಸರ್ಕಾರಿ ಮಹಿಳಾ ನೌಕರರಿಗೆ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 135(1)ರನ್ವಯ ಪ್ರಸೂತಿ ರಜೆಯನ್ನು ಎರಡು ಜೀವಂತ ಮಕ್ಕಳ ಪ್ರಸೂತಿಗೆ ಆರಂಭದ ದಿನಾಂಕದಿಂದ 180 ದಿನಗಳವರೆಗೆ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.

		ಮುಂದುವರೆದು, ಅದೇ ನಿಯಮಾವಳಿಯ ನಿಯಮ 135 ಬಿ(1) ರನ್ವಯ ಪುರುಷ ಸರ್ಕಾರಿ ನೌಕರನಿಗೆ ಅವನ ಪತ್ನಿಯ ಹೆರಿಗೆಯ ಕಾಲದಲ್ಲಿ ಎರಡು ಜೀವಂತ ಮಕ್ಕಳ ಪ್ರಸೂತಿಗೆ ಪ್ರತಿ ಬಾರಿಗೆ 15 ದಿನಗಳ ಪಿತೃತ್ವ ರಜೆಯನ್ನು ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ.
ಇ)	"ಶಿಶು" ಪದದ ವ್ಯಾಖ್ಯಾನ ಹಾಗೂ ಶಿಶು ಎಂದು ಪರಿಗಣಿಸಲು ನಿರ್ಧರಿಸಬಹುದಾದ ವಯೋಮಿತಿಯನ್ನು ತಿಳಿಸುವುದು.	18 ವರ್ಷ ತಲುಪುವವರೆಗಿನ ಮಕ್ಕಳನ್ನು "ಶಿಶು" ಎಂದು ಪರಿಗಣಿಸಲಾಗಿದೆ.
ಈ)	1 ಅಥವಾ 2 ವಯಸ್ಸಿನ ಶಿಶು ಹೊಂದಿರುವ ತಾಯಿಗೂ ಹಾಗೂ 16 ಅಥವಾ 17 ವರ್ಷದ ವಯಸ್ಸಿನ ಶಿಶುವಿನ ಮಹಿಳಾ ನೌಕರರಿಗೆ 180 ದಿನಗಳು ಸಮಾನ ರೂಪದ ರಜೆ ಪಡೆಯಲು ಆದೇಶ ಹೊರಡಿಸಿದಾಗ ತಾರತಮ್ಯವಾಗುವುದಿಲ್ಲವೇ; ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು.	ಈ ಸೌಲಭ್ಯವು ಯಾವುದೇ ತಾರತಮ್ಯವಿಲ್ಲದೇ ಕಿರಿಯ ಮಗು 18 ವರ್ಷ ತಲುಪುವವರೆಗೂ ಸರ್ಕಾರಿ ಮಹಿಳಾ ನೌಕರರಿಗೆ ಮಂಜೂರು ಮಾಡುವ ಸದುದ್ದೇಶದಿಂದ ಕೂಡಿರುತ್ತದೆ. ಆದುದರಿಂದ ಯಾವುದೇ ತಾರತಮ್ಯದ ಪ್ರಶ್ನೆ ಉದ್ಭವಿಸುವುದಿಲ್ಲ.
ಉ)	ಪತ್ನಿಯು ನಿಧನ ಹೊಂದಿರುವ ಪುರುಷ ಸರ್ಕಾರಿ ಅಧಿಕಾರಿ/ನೌಕರರಿಗೆ ಶಿಶುಪಾಲನಾ ರಜೆ ಅನ್ವಯಿಸುವುದಿಲ್ಲವೇ; ಇಲ್ಲದಿದ್ದಲ್ಲಿ ತಾರತಮ್ಯವಾಗುವುದಿಲ್ಲವೇ; ಈ ಸಂಬಂಧ ಶಿಶುಪಾಲನಾ ಆದೇಶವನ್ನು ತಕ್ಷಣ ನಿಲ್ಲಿಸಲು ತೆಗೆದುಕೊಂಡಿರುವ ಕ್ರಮಗಳೇನು; ಆದೇಶದಲ್ಲಿ ಒಳಗೊಂಡಿರುವ ಲೋಪದೋಷಗಳನ್ನು ಸರಿಪಡಿಸಿ ಮಾರ್ಪಾಡು ಆದೇಶ ಹೊರಡಿಸಲಾಗುವುದೇ?(ವಿವರ ನೀಡುವುದು)	ಇಲ್ಲ. ಆರ್ಥಿಕ ವರ್ಷ 2021-22ನೇ ಸಾಲಿನ ಆಯವ್ಯಯ ಭಾಷಣ ಕಂಡಿಕೆ-37ರಲ್ಲಿ ರಾಜ್ಯ ಸರ್ಕಾರದ ಆಡಳಿತ ಯಂತ್ರದ ಬಹುಮುಖ್ಯ ಭಾಗವಾಗಿರುವ ಮಹಿಳೆಯರ ಕ್ಷೇಮಾಭಿವೃದ್ಧಿಗೆ ಪೂರಕವಾಗಿ ಹಾಗೂ ಮಹಿಳೆಯರ ಕಾರ್ಯಕ್ಷಮತೆ ಹೆಚ್ಚಿಸುವ ಸದುದ್ದೇಶದಿಂದ ಮಹಿಳಾ ಉದ್ಯೋಗಿಗಳಿಗೆ ಚಾಲ್ತಿಯಲ್ಲಿರುವ ಪ್ರಸೂತಿ ರಜೆಯೊಂದಿಗೆ ಶಿಶುಪಾಲನಾ ರಜೆ ಸೌಲಭ್ಯವನ್ನು ಘೋಷಿಸಲಾಗಿದ್ದು, ಅದರನ್ವಯ ಸದರಿ ಆದೇಶವನ್ನು ಹೊರಡಿಸಲಾಗಿದೆ. ಸದರಿ ಆದೇಶದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅಥವಾ ಆದೇಶದಲ್ಲಿ ಲೋಪದೋಷಗಳಿರುವ ಬಗ್ಗೆ ಸರ್ಕಾರಕ್ಕೆ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ. ಆದುದರಿಂದ ಇದನ್ನು ಹಿಂಪಡೆಯುವ ಕುರಿತು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಸಂಖ್ಯೆ: ಆಇ 12 ಸೇನಿಸೇ 2021